

# ಜೋರ್‌ಬೀರ್

## ರಣಹದ್ದುಗಳ ಅಭಯಾರಣ್ಯ

**ಭಾರತದಲ್ಲಿ ರಣಹದ್ದುಗಳು ವಿನಾಶದ ಅಂಚಿಗೆ ಬಂದು ನಿಂತಿದ್ದರೂ, ರಾಜಸ್ಥಾನದ ಜೋರ್‌ಬೀರ್‌ನಲ್ಲಿ ಹಲವು ಪ್ರಭೇದದ ಹದ್ದುಗಳು ಈಗಲೂ ಕಾಣಸಿಗುತ್ತವೆ. ದೇಶದಲ್ಲಿ ರಣಹದ್ದುಗಳ ಸಂಖ್ಯೆಯ ಪುನರುತ್ಥಾನಕ್ಕೆ ಈ ಅಭಯಾರಣ್ಯದ್ದು ಅಸಾಧಾರಣ ಕೊಡುಗೆ.**

**■ ಜಿ.ಆರ್. ಪಂಡಿತ್**

ನಾನು ಚಿಕ್ಕವನಿದ್ದಾಗ, ಅಂದರೆ ಸುಮಾರು 50–55 ವರ್ಷಗಳ ಹಿಂದೆ ನಮ್ಮೂರಿನ ಬೆಟ್ಟಗುಡ್ಡಗಳಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ 'ರಣಹದ್ದುಗಳು' ಇತ್ತೀಚೆಗೆ ಕಣ್ಮರೆಯಾಗಿಬಿಟ್ಟಿವೆ. ಬೆಟ್ಟದ ಕೋಡುಗಲ್ಲುಗಳ ಮೇಲೆ ಕೂತು ಭಯಾನಕವಾಗಿ ಕಾಣುತ್ತಿದ್ದ ಈ ಪಕ್ಷಿ, ಅದರ ಆಕಾರ–ಗಾತ್ರ, ಉದ್ದ ಕತ್ತು, ಮಾಂಸ ಕತ್ತರಿಸುವ ಚೂಪು ಕೊಕ್ಕುಗಳು, ವಿಶಾಲ ರೆಕ್ಕೆಗಳು, ನೀಳ ಬಲಿಷ್ಠ ಕಾಲುಗಳು, ಭಯ ಹುಟ್ಟಿಸುವ ಕಣ್ಣುಗಳು, ಅದರ ವಿಚಿತ್ರ ಕೂಗು–ಕೇಕೆಗಳು ನಾವು ಒಬ್ಬೊಬ್ಬರೇ ಹೋಗುವಾಗ ಭಯ ಹುಟ್ಟಿಸುತ್ತಿದ್ದವು.

ನಮ್ಮೂರಿನ ಜನ ಊರಲ್ಲಿ ಯಾವುದೇ ಸಾಕುಪ್ರಾಣಿ, ಹಸು, ಎಮ್ಮೆ, ನಾಯಿ, ಬೆಕ್ಕು ಸತ್ತರೆ ಅವುಗಳ ಮೃತಶರೀರವನ್ನು ಹೊತ್ತು ತಂದು ಈ ಕೋಡುಗಲ್ಲುಗಳ ಬಳಿ ಎಸೆಯುತ್ತಿದ್ದರು. ಗುಂಪುಗಳಲ್ಲಿ ಬಂದು ಈ ಹದ್ದುಗಳು ಒಂದೆರಡು ದಿನದಲ್ಲಿ ಮುಕ್ಕಿಬಿಡುತ್ತಿದ್ದವು. ಈಗ ನಮ್ಮೂರಿನ ಯಾವ ಬೆಟ್ಟದಲ್ಲೂ ಈ ಬೇಟೆಗಾರ ಹಕ್ಕಿಗಳ ಸುಳಿವೇ ಇಲ್ಲ. ಮತ್ತೆ ನನಗೆ ರಣಹದ್ದುಗಳ ಬಗ್ಗೆ ನೆನಪಾಗುವುದಕ್ಕೆ ಕಾರಣ, ರಾಜಸ್ಥಾನ ಪ್ರವಾಸ. ಕೋಟೆಗಳ ನಾಡು 'ಬಿಕಾನೇರ್'ನಲ್ಲಿ ತಂಗಿದ್ದಾಗ, ಮಾರ್ಗದರ್ಶಿಯೊಬ್ಬ ಸಮೀಪದಲ್ಲಿನ 'ಜೋರ್‌ಬೀರ್ ರಣಹದ್ದುಗಳ ಅಭಯಾರಣ್ಯ'ದ ಬಗ್ಗೆ ತಿಳಿಸಿದ. ಜೋರ್‌ಬೀರ್ ರಣಹದ್ದುಗಳ ಆವಾಸಸ್ಥಾನ. ಅಲ್ಲಿ ಅನೇಕ ಜಾತಿಯ ರಣಹದ್ದುಗಳನ್ನು ನೋಡಬಹುದೆಂಬ ಮಾಹಿತಿ ತಿಳಿಯುತ್ತಿದ್ದಂತೆ ನನಗೂ ನೋಡುವ ಕುತೂಹಲ ಮೂಡಿತು. ಮರುದಿನ ಬೆಳಿಗ್ಗೆ ಆಟೊದಲ್ಲಿ ನಾನು, ಸ್ನೇಹಿತ ಹೊರಟೇಬಿಟ್ಟೆವು.

ಜೋರ್‌ಬೀರ್ ನಿಜವಾಗಿಯೂ ಅಭಯಾರಣ್ಯವೇನಲ್ಲ. ಸುಮಾರು 25–30 ಎಕರೆ ವಿಶಾಲ ಬಯಲು ಪ್ರದೇಶ. ಇದೊಂದು 'ಡಂಪಿಂಗ್ ಯಾರ್ಡ್'. ಬಿಕಾನೇರ್ ಜಿಲ್ಲಾಡಳಿತದ ಆದೇಶದ ಪ್ರಕಾರ, ಜಿಲ್ಲೆಯಾದ್ಯಂತ ಯಾವುದೇ ಸಾಕುಪ್ರಾಣಿ (ದನ, ಎಮ್ಮೆ, ನಾಯಿ, ಬೆಕ್ಕು, ಒಂಟೆ) ಸತ್ತರೆ, ಅದರ ಶರೀರವನ್ನು ತಂದು ಇಲ್ಲಿ ಎಸೆಯುತ್ತಾರೆ. ಜಿಲ್ಲಾಡಳಿತವೇ ಈ ಶವಗಳನ್ನು ಅಲ್ಲಿಗೆ ಉಚಿತವಾಗಿ ಸಾಗಿಸುತ್ತದೆ. ಪ್ರಾಣಿಗಳ ಕೊಳೆತ ಮಾಂಸವನ್ನು ತಿನ್ನುವುದಕ್ಕೆ ಜೋರ್‌ಬೀರ್ ಬಯಲಿಗೆ ಅನೇಕ ಜಾತಿಯ ರಣಹದ್ದುಗಳು ಬರುತ್ತವೆ ಮತ್ತು ಯಥೇಚ್ಛವಾಗಿ ಆಹಾರ ಸಿಗುವುದರಿಂದ ಈ ಪ್ರದೇಶವನ್ನೇ ತಮ್ಮ ಆವಾಸಸ್ಥಾನವಾಗಿಸಿಕೊಂಡಿವೆ. ಮಧ್ಯ ಏಷ್ಯಾದಿಂದ ವಲಸೆ ಬಂದ ಹಿಮಾಲಯನ್ ರಣಹದ್ದುಗಳು, ಸ್ಪೇನ್‌ನಿಂದ ಬಂದ ಯುರೇಷಿಯನ್ ಹದ್ದುಗಳು, ಟಿಬೆಟ್, ಮಂಗೋಲಿಯಾಗಳ ರಣಹದ್ದುಗಳು, ಈಜಿಪ್ಷಿಯನ್ ರಣಹದ್ದುಗಳು, ಉದ್ದ ಕೊಕ್ಕಿನ ಹದ್ದುಗಳು, ಬೋಳುತಲೆಯ ರಣಹದ್ದುಗಳು, ಸ್ಟೆಪ್ಪೆ ಹದ್ದುಗಳು ಇಲ್ಲಿ ನೂರಾರು ಸಂಖ್ಯೆಯಲ್ಲಿ ನೋಡಲು ಸಿಗುತ್ತವೆ.

ರಣಹದ್ದುಗಳು ಅಕ್ಸಿಪಿಟ್ರಿಡೆ ಕುಟುಂಬಕ್ಕೆ ಸೇರಿದವು. ಸಾಮಾನ್ಯವಾಗಿ ಕೊಳೆತ ಮಾಂಸ ತಿನ್ನುವ ಹಿಂಸ್ರ ಪಕ್ಷಿಗಳು. ಇವುಗಳನ್ನು ಪ್ರಾಚೀನ ಜಗತ್ತಿನ ರಣಹದ್ದುಗಳು ಹಾಗೂ ನವೀನ ಜಗತ್ತಿನ ರಣಹದ್ದುಗಳು ಎಂದು ವಿಂಗಡಿಸಿದ್ದಾರೆ. ರಣಹದ್ದು ಎಂಬ ಸಾಮಾನ್ಯ ಹೆಸರಿನ 20ಕ್ಕೂ ಹೆಚ್ಚು ಪ್ರಭೇದಗಳಿವೆ. ಉಷ್ಣ ಹಾಗೂ ಸಮಶೀತೋಷ್ಣ ವಲಯಗಳಲ್ಲಿ ಕಂಡುಬರುವ ಈ ಪಕ್ಷಿಗಳು, ಆಸ್ಟ್ರೇಲಿಯಾ, ಹಿಂದೂ ಮಹಾಸಾಗರದ ನಡುವೆ

